(iv) ಆಯುರ್ವೇದ ಮಹಾ ವಿದ್ಯಾಲಯಗಳಿಗೆ ನಿರ್ವಹಣ ಧನವನ್ನು ಹಠಾತ್ತಾಗಿ ನಿಲ್ಲಿಸಿರುವುದು

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಉತ್ತರ ಕರ್ನಾಟಕದ ಬೆಳಗಾವಿ, ಬಿಜಾಪುರ ಹುಬ್ಬಳ್ಳಿ, ಗದಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ನಗರಗಳಲ್ಲಿ ಅನೇಕ ವರ್ಷಗಳಿಂದ ಖಾಸಗಿಯಾಗಿ ಆಯುರ್ವೇದ ಮಹಾ ವಿದ್ಯಾಲಯಗಳು ಅಸ್ತಿತ್ವದಲ್ಲಿವೆ. ಈ ಆಯುರ್ವೇದ ಮಹಾ ವಿದ್ಯಾಲಯಗಳಿಂದ ಪ್ರತಿ ವರ್ಷ ನೂರಾರು ವೈದ್ಯರು ಹೊರಬೆಂದು ಗ್ರಾಮಾಂತರ ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವುದು ತಮಗೆ ತಿಳಿದಿರುವ ವಿಚಾರ. ಶಿಕ್ಷಣದ ಮಟ್ಟದಲ್ಲಿಯೂ ಅವು ತಮ್ಮ ಹಿರಿಮೆಯನ್ನು ಸಾಧಿಸಿಕೊಂಡು ಬಂದಿವೆ. ಇತ್ತೀಚಿನ ವರ್ಷಗಳಿಂದ ಇಲ್ಲಿ ಕೆಲಸ ಮಾಡುವಂತಹ ಸಿಬ್ಬಂದಿ ವರ್ಗಕ್ಕೆ ಸರಕಾರದವರು ಸಂಬಳವನ್ನು ನೇರವಾದ ಚೆಕ್ ಮೂಲಕ ತಲುಪಿಸಿ ಅವರ ಸೇವೆಗೆ ಭದ್ರತೆಯನ್ನು ಒದಗಿಸಿದ್ದಾರೆ. ಈ ಕೆಲಸಕ್ಕಾಗಿ ನಾನು ಸರಕಾರವನ್ನು ಹಾಗೂ ಮಾನ್ಯ ಆರೋಗ್ಯ ಸಚಿವರನ್ನು ಅಭಿನಂದಿಸುತ್ತೇನೆ.

೧೯೮೬ಕ್ಕಿಂತ ಮುಂಚೆ ಮೇಲ್ಕಾಣಿಸಿದ ೫ ಮಹಾ ವಿದ್ಯಾಲಯಗಳಿಗೆ ಸರಕಾರದವರು ನಿರ್ವಹಣಾ ಧನವೆಂದು ಸುಮಾರು ೧೦ ಲಕ್ಷ ರೂಪಾಯಿಗಳಷ್ಟು ಹಣವನ್ನು ಪ್ರತಿ ವರ್ಷವೂ ಕೊಡುತ್ತಾ ಬಂದಿದ್ದರು. ದುರ್ದೈವವಶಾತ್ ೧-೪-೧೯೮೬ ರಿಂದ ಈ ನಿರ್ವಹಣಾ ಧನವನ್ನು ಸರಕಾರದವರು ಹಠಾತ್ತಾಗಿ ನಿಲ್ಲಿಸಿದ್ದಾರೆಂದು ತಿಳಿದು ಬಂದಿದೆ. ಕೇವಲ ಸಿಬ್ಬಂದಿಗೆ ನೇರವಾಗಿ ಚೆಕ್ ತಲುಪಿ ಅವರ ಸ್ಥಿತಿಗತಿಗಳು ಸುಧಾರಿಸಿದರೆ ಸಾಲದು ಮಹಾ ವಿದ್ಯಾಲಯಗಳನ್ನು ಆರ್ಥಿಕವಾಗಿ ಕಾಪಾಡಿಕೊಂಡು ಬರುವುದು ಅತ್ಯಂತ ಅವಶ್ಯಕವಾಗಿದೆ.

ಆಯುರ್ವೇದ ಮಹಾವಿದ್ಯಾಲಯಗಳಿಗೆ ಮತ್ತು ಅವುಗಳಿಗೆ ಹೊಂದಿಕೊಂಡಿರುವಂತಹ ಆಸ್ಪತ್ರೆಗಳಿಗೆ ಪ್ರತಿ ವರ್ಷ ಲಕ್ಷಾಂತರ ರೂಪಾಯಿಗಳ ಬೆಲೆ ಬಾಳುವ ಉಪಕರಣಗಳು ಹಾಗೂ ಇತರೆ ಸಾಮಗ್ರಿಗಳು ಬೇಕು ಇತರೆ ಮಹಾ ವಿದ್ಯಾಲಯಗಳಿಗೆ ವಿಶೇಷ ವೃತ್ತಿ ನಿರತ ಸಂಸ್ಥೆಗಳಿಗೆ ಕ್ಯಾಪಿಟೇಷನ್ ಮೂಲಕ ಲಕ್ಷಾಂತರ ರೂಪಾಯಿಗಳ ಆದಾಯ ಹರಿದು ಬರುತ್ತದೆ. ಇಲ್ಲಿ ಅದು ಬರುವುದಿಲ್ಲ. ಆಯುರ್ವೇದ ವೈದ್ಯಪದ್ಧತಿಗೆ ಶಿಕ್ಷಣಕ್ಕೆ ನಮ್ಮ ಸರಕಾರ ಪ್ರಾಡಿರುವ ವೆಚ್ಚ ಆಪಾರ ಹೀಗಿದ್ದು ಯಾವ ಕಾರಣದಿಂದ ನಿರ್ವಹಣಾ ವೆಚ್ಚವನ್ನು ತಡೆಹಿಡಿಯಲಾಗಿದೆ ಎಂಬುದು ಗೊತ್ತಾಗಿಲ್ಲ. ಈ ಸಂಸ್ಥೆಗಳ ಕಷ್ಟ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅವುಗಳಿಗೆ ಮೊದಲಿನಂತೆಯೇ ನಿರ್ವಹಣಾ ವೆಚ್ಚಕ್ಕಾಗಿ ಹಣವನ್ನು ಕೊಡಬೇಕೆಂದು ಮತ್ತು ಈ ಕುರಿತು ಶೀಘ್ರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಆರೋಗ್ಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಸಚಿವರು).—ಕರ್ನಾಟಕದಲ್ಲಿ ಐದು ಖಾಸಗಿ ಆಯುರ್ವೇದ ಕಾಲೇಜುಗಳಿವೆ. ಅವುಗಳು ಯಾವುವೆಂದರೆ (೧) ಉಡುಪಿ (೨) ಹುಬ್ಬಳ್ಳಿ (೩) ಬೆಳಗಾಂ (೪) ಬಿಜಾಪುರ ಮತ್ತು (೫) ಗದಗ. ಈ ಸಂಸ್ಥೆಗಳಿಗೆ ೩೧-೩-೧೯೮೨ರ ವರೆವಿಗೆ ಅಂಗೀಕೃತ ವೆಚ್ಚದಲ್ಲಿ ಆದಾಯವನ್ನು ಕಳೆದು ಮಿಕ್ಕ ಹಣದಲ್ಲಿ ನಿರ್ವಹಣಾ ವೆಚ್ಚವೂ ಸೇರಿದಂತೆ ಮಹಾ ವಿದ್ಯಾಲಯಗಳಿಗೆ ೫೦ ಪ್ರತಿಶತ ಸಹಾಯಧನವನ್ನು ಮತ್ತು ಮಹಾ ವಿದ್ಯಾಲಯಕ್ಕೆ ಸೇರಿದ ಆಸ್ಪತ್ರೆಗಳಿಗೆ ೨೫ ಪ್ರತಿಶತ ಸಹಾಯಧನವನ್ನು ಕೊಡುತ್ತಾ ಬಂದಿರುತ್ತದೆ. ಅಲ್ಲದೆ, ಸರ್ಕಾರಿ ಆಜ್ಞೆ ಕ್ರಮಾಂಕ ಹೆಚ್‌ಎಫ್‌ಡಬ್ಲ್ಯೂ ೭೮ ಐಎಂಜಿ ೮೨ ದಿನಾಂಕ ೧೫-೧೧-೧೯೮೨ರ ಆದೇಶದ ಮೇರೆಗೆ ೧-೪-೧೯೮೨ ರಿಂದ ಅಂಗೀಕೃತ ವೆಚ್ಚದಲ್ಲಿ ಅನುಮೋದಿತ ಅಪರ್ತ ಖರ್ಚಿನ ೯೦ ಪ್ರತಿಶತ ಮಹಾ ವಿದ್ಯಾಲಯಗಳಿಗೂ (ನಿರ್ವಹಣಾ ವೆಚ್ಚವೂ ಸೇರಿದಂತೆ) ಮತ್ತು ೭೫ ಪ್ರತಿಶತ ಮಹಾ ವಿದ್ಯಾಲಯಕ್ಕೆ ಸೇರಿದ ಆಸ್ಪತ್ರೆಗಳಿಗೆ ಸಹಾಯಧನವನ್ನು ಮಂಜೂರು ಮಾಡಲಾಗುತ್ತಿತ್ತು. ಈ ರೀತಿ ೯೦ ಪ್ರತಿಶತ ಮತ್ತು ೭೫ ಪ್ರತಿಶತ ಕಾಲೇಜು ಮತ್ತು ಆಸ್ಪತ್ರೆಗಳಿಗೆ ಸಹಾಯಧನ ಕೊಡುತ್ತಾ ಬಂದಿದ್ದರಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು ೨೧,೦೦,೯೦೬-೦೦ ರೂಪಾಯಿಗಳು ವೆಚ್ಚವಾಗುತ್ತಿತ್ತು.

ನಂತರ ಮಹಾ ವಿದ್ಯಾಲಯಗಳ ವ್ಯವಸ್ಥಾಪಕ ಮಂಡಲಿಗಳು ತಮ್ಮ ಪಾಲಿನ ೧೦ ಪ್ರತಿಶತ ಕಾಲೇಜಿಗೂ ಮತ್ತು ೨೫ ಪ್ರತಿಶತ ಆಸ್ಪತ್ರೆಗೂ ಸಿಬ್ಬಂದಿ ವೆಚ್ಚವನ್ನು ಕೊಡಲಾಗುವುದಿಲ್ಲ ಎಂದು ತಿಳಿಸಿರುವುದರಿಂದ ಅಂತೆಯೇ ಉಪಾಧ್ಯಾಯ ಸಂಘದ ನಿವೇದನೆ ಮೇರೆಗೆ ಸರ್ಕಾರವು ತನ್ನ ಆ ದೇಶವನ್ನು

ಹೆಚ್.ಎಫ್.ಡಬ್ಲ್ಯು ೫೯ ಐಎಂಜ ೮೪ (೧೧) ದಿನಾಂಕ ೩-೭-೧೯೮೬ ರಲ್ಲಿ ೧-೪-೧೯೮೬ರಿಂದ ೧೦೦ ಪ್ರತಿಶತ ಕಾಲೇಜು ಮತ್ತು ಆಸ್ಪತ್ರೆ ಸಿಬ್ಬಂದಿ ವರ್ಗಕ್ಕೆ ಚೆಕ್ ಮುಖಾಂತರ ಸಂಬಳ ಪಾವತಿ ಮಾಡಲು ಆದೇಶ ನೀಡಿದೆ. ಇದರಲ್ಲಿ ವಿದ್ಯಾರ್ಥಿಗಳಿಂದ ಬಂದ ಶುಲ್ಕವನ್ನ ಎಲ್ಲಾ ಕಾಲೇಜುಗಳೂ ಸರ್ಕಾರದ ಬೊಕ್ಕಸಕ್ಕೆ ಜಮಾ ಮಾಡಬೇಕೆಂದು ತಿಳಿಸಿರುತ್ತದೆ ಈ ರೀತಿ ೧೦೦ ಪ್ರತಿಶತ ಸಂಬಳವನ್ನು ಸಿಬ್ಬಂದಿ ವರ್ಗಕ್ಕೆ ಕೊಡುವುದರಿಂದ ಒಟ್ಟು ಸರ್ಕಾರದ ಬೊಕ್ಕಸಕ್ಕೆ ಒಂದು ವರ್ಷಕ್ಕೆ ತಗಲುವ ಅಂದಾಜು ವೆಚ್ಚ ೪೦ ಲಕ್ಷ ರೂಪಾಯಿಗಳಾಗುತ್ತದೆ; ಸಧ್ಯದಲ್ಲೇ ಈ ವೆಚ್ಚವನ್ನು ಏಪ್ರಿಲ್ ೧೯೮೬ ರಿಂದ ಪಾವತಿ ಮಾಡಲು ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಇದರಲ್ಲಿ ನಿರ್ವಹಣಾ ವೆಚ್ಚ ಸೇರಿಲ್ಲ. ಕಾರಣ ೧೦೦ ಪ್ರತಿಶತ ಸಿಬ್ಬಂದಿ ವರ್ಗ ವಚ್ಚವನ್ನೆಲ್ಲಾ ಸರ್ಕಾರ ನಿರ್ವಹಿಸುವುದರಿಂದ ವ್ಯವಸ್ಥಾಪಕ ವರ್ಗದ ಹೊಣೆ ಸ್ವಲ್ಪ ಆವರ ಮೇಲೆ ಇರಲಿ ಎಂಬ ದೃಷ್ಟಿಯಿಂದ ಸರ್ಕಾರವೇ ಸಿಬ್ಬಂದಿಯ ಎಲ್ಲಾ ವೆಚ್ಚವನ್ನು ಭರಿಸುವುದರಿಂದ ವಿದ್ಯಾಲಯಗಳು ಆಡಳಿತ ಖರ್ಚನ್ನು ಕೆಲವಷ್ಟಿಗಾದರೂ ಹೊಸಬೇಕಾಗುತ್ತದೆ. ಒಂದು ವೇಳೆ ಎಲ್ಲಾ ವೆಚ್ಚವನ್ನೂ ಸರ್ಕಾರವೇ ಭರಿಸಿದರೆ ಇವು ಸರ್ಕಾರೀ ಕಾಲೇಜುಗಳು ಆಗುತ್ತವೆಯೇ ಹೊರತು ಖಾಸಗೀ ಕಾಲೇಜುಗಳು ಆಗುವುದಿಲ್ಲ. ಈ ರೀತಿ ಇಷ್ಟು ಸಹಾಯಧನ ಆಯುರ್ವೇದ ಕಾಲೇಜುಗಳಿಗೆ ಕೊಡುವುದು ಕರ್ನಾಟಕ ರಾಜ್ಯವಲ್ಲದೆ ಮತ್ಯಾವ ರಾಜ್ಯದಲ್ಲೂ ಇಲ್ಲ ಎಂದರೆ ಅತಿ ಶಯೋಕ್ತಿಯಾಗಲಾರದು.

V ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಂಗಾಮಿಯಾಗಿ ದೀರ್ಘ ಸೇವೆ ಸಲ್ಲಿಸಿರುವ ವರನ್ನು ಖಾಯಂ ಮಾಡುವುದು

ಶ್ರಿ ಕೆ. ಹೆಚ್. ಪಾಟೀಲ್.—ಅಧ್ಯಕ್ಷರೇ, ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರಾಗಿ ಕೆಲಸ ಮಾಡಿದ ಅನೇಕ ನೌಕರರು ೧೫ ವರ್ಷಗಳಿಗಿಂತ ದೀರ್ಘವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದರೂ ಅವರನ್ನು ಹಂಗಾಮಿಯಾಗಿಯೇ ಮುಂದುವರಿಸಲಾಗಿದೆ. ಕರ್ನಾಟಕ ಲೋಕ ಸೇವಾ ಕಾನೂನಿನಲ್ಲಿ ಲೆ-ಟಿ-ಆಸಿಕ್ಕಿಂತ ಹಿಂದಿನ ಎಲ್ಲಾ ನೌಕರರನ್ನು ಖಾಯಂಗೊಳಿಸಬೇಕೆಂದು ತಿಳಿಸಿದ್ದರೂ ಸಹಾ ವಿಶ್ವವಿದ್ಯಾಲಯದವರು ಅದರ ವಿರೋಧವಾಗಿ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಆ ಬಗ್ಗೆ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆಂದು ನಾನು ತಿಳಿಯ ಬಯಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಅಲ್ಲಿ ಹಂಗಾಮಿಯಾಗಿ ಕೆಲಸ ಮಾಡುತ್ತಿರುವ ಕೆಲವರು ಇನ್ನೂ ಇದ್ದಾರೆ. ಏನಾದರೂ ಮಾಡಿ ಅವರಿಗೆ ಅನುಕೂಲ ಮಾಡಿ ಎಂದು ಸರ್ಕಾರ ಕೂಡ ಆದೇಶವನ್ನು ಕೊಟ್ಟಿರುತ್ತದೆ, ಅಲ್ಲಿನ ಟೀಚರ್ಸ್‌ನ್ನು ಅಪಾಯಿಂಟ್ ಮಾಡುವ ಬಗ್ಗೆ ಪೋಡ್ ಆಫ್ ಅಪಾಯಿಂಟ್‌ಮೆಂಟೇ ಬೇರೆ. ಅಲ್ಲಿ ಬೋರ್ಡ್ ಆಫ್ ಅಥಾರಿಟಿ ಇದೆ. ಅಲ್ಲಿ ಅವರು ಅರ್ಜಿ ಹಾಕಬೇಕು. ಅಲ್ಲಿ ಕೆಲವರಿಗೆ ಸಿಕ್ಕಿರುವುದಿಲ್ಲ. ಸಿಕ್ಕದೇ ಇರುವವರಿಗೆ ಬೇರೆ ರೀತಿಯಲ್ಲಿ ಅನುಕೂಲ ಮಾಡಿ ಎಂದು ತಿಳಿಸಿದ್ದೇವೆ. ಆ ಬಗ್ಗೆ ಅವರ ಹತ್ತಿರ ಮಾತನಾಡಿ ಅನುಕೂಲ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

VI ತರೀಕೆರೆ ತಾಲ್ಲೂಕು ನೇರಳೆಕೆರೆ ಗ್ರಾಮದ ಪಶುವೈದ್ಯಶಾಲೆಗೆ ಮುಂಜೂರಾತಿ ದೊರೆಯದಿರುವುದು

ಶ್ರೀ ಬಿ. ಆರ್. ನೀಲಕಂಠಪ್ಪ.—ಅಧ್ಯಕ್ಷರೇ, ತರೀಕೆರೆ ತಾಲ್ಲೂಕು ನೇರಳೆಕೆರೆ ಗ್ರಾಮಕ್ಕೆ ೧೯೭೨ನೇ ಸಾಲಿನಲ್ಲಿ ಪಶುವೈದ್ಯ ಆಸ್ಪತ್ರೆ ಮಂಜೂರಾತಿಯಾಗಿದೆಯೆಂದು ಗ್ರಾಮಸ್ಥರು ಕಟ್ಟಡವನ್ನು ಕಟ್ಟಿರುತ್ತಾರೆಯಾದ್ದು ಇವರ ಪ್ರಾರಂಭೋತ್ಸವಕ್ಕೆ ಹಿಂದಿನ ಸಚಿವರು ಮತ್ತು ನಾನು ಹೋಗಿ ಪಾಪಸ್ ಬಂದಿರುತ್ತೆವೆ. ಈ ಆಸ್ಪತ್ರೆ ಮಂಜೂರಾತಿ ಕೊಡುತ್ತೇವೆಂದು ಸಧ್ಯದಲ್ಲಿ ಸಚಿವರು ಒಪ್ಪಿರುತ್ತಾರೆ. ಆದರೆ ಇಲ್ಲಿಯವರೆವಿಗೂ ಮಂಜೂರಾತಿ ದೊರೆತಿಲ್ಲ. ಆ ಗ್ರಾಮದಲ್ಲಿ ಮಾತ್ರ ಪಶುವೈದ್ಯ ಆಸ್ಪತ್ರೆ ಎಂದು ನಾಮ ಫಲಕ ಈಗಲೂ ಇದೆ. ಆದ್ದರಿಂದ ತಾವು ಯಾವಾಗ ಆಸ್ಪತ್ರೆ ಮಂಜೂರಾತಿ ಮಾಡುತ್ತೀರಾ ತಿಳಿಸಿ ಅಥವಾ ಆಸ್ಪತ್ರೆ ಕಟ್ಟಡವನ್ನು ಹರಾಜು ಮಾಡಿ ಪುನಃ ಅವರ ಹಣವನ್ನು ಪಡೆದುಕೊಳ್ಳಲೇ ಏನು ಮಾಡಲಿ ತಿಳಿಸಿ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ ಹಾಗೂ ಪಶು ಸಂಗೋಪನಾ ಮಂತ್ರಿಗಳು).—ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ನೇರಳೇಕೆರೆ ಗ್ರಾಮ ೧೯೮೨-೮೩ರ ಸರ್ಕಾರಿ ಆದೇಶ